# ಶ್ರೀಮಾತೆ ಶಾರದಾದೇವಿ

ಬಂಗಾಳಿ ಮೂಲ : **ಸ್ವಾಮಿ ಶಿವಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀಮಾತೆಯವರು ಈ ಯುಗದ ಸಮಸ್ತ ನಾರೀವರ್ಗದ ಆದರ್ಶವಾಗಿದ್ದರು. ಅವರ ಜೀವನ ಅತ್ಯಂತ ಅದ್ಭುತವಾದುದು. ಅವರು ಮಾನವ ದೇಹವನ್ನು ಧರಿಸಿ, ಸಾಮಾನ್ಯ ಗೃಹಿಣಿಯಂತೆ ಇರುತ್ತಿದ್ದರು. ಆದರೆ ಅವರು ಸಾಕ್ಷಾತ್ ಆದ್ಯಾಶಕ್ತಿಯಾಗಿದ್ದರು, ಜಗಜ್ಜನನಿಯಾಗಿದ್ದರು. ಶಾಸ್ತ್ರದಲ್ಲಿ ಯಾವ ಕಾಳಿ, ತಾರಾ, ಷೋಡಶಿ ಮೊದಲಾದ ದಶಮಹಾವಿದ್ಯೆಯ ವಿಷಯವಾಗಿ ಉಲ್ಲೇಖವಾಗಿದೆಯೋ, ಆ ದಶ ಮಹಾವಿದ್ಯೆಯಲ್ಲಿ ಒಬ್ಬರಾಗಿದ್ದರು ಶ್ರೀಮಾತೆ. ಶ್ರೀರಾಮಕೃಷ್ಣರು ಯುಗಧರ್ಮವನ್ನು ಸಂಸ್ಥಾಪನೆಗೊಳಿಸಲು ಮಾಡಿದ ನರಲೀಲೆಯನ್ನು ಪೂರ್ಣಗೊಳಿಸುವುದಕ್ಕಾಗಿ ಅವರು ಈ ಜಗತ್ತಿನಲ್ಲಿ ಅವತರಣ ಮಾಡಿದರು. ಸಾಮಾನ್ಯ ಮಾನವರು ಅವರನ್ನು ಹೇಗೆ ತಿಳಿಯಬಲ್ಲರು? ಆರಂಭದಲ್ಲಿ ನಮಗೂ ಅವರನ್ನು ಸ್ವಲ್ಪವೂ ಅರಿತುಕೊಳ್ಳಲು ಸಾಧ್ಯವಾಗಲಿಲ್ಲ. ಅವರು ತಮ್ಮ ದೈವೀಭಾವವನ್ನು ಎಷ್ಟೊಂದು ಅಡಗಿಸಿಟ್ಟುಕೊಂಡಿದ್ದರು ಎಂದರೆ, ಅವರನ್ನು ತಿಳಿಯಲು ಯಾವುದೇ ಅವಕಾಶವಿರುತ್ತಿರಲಿಲ್ಲ. ಅವರು ಏನಾಗಿದ್ದರು ಎಂಬುದನ್ನು ಶ್ರೀರಾಮಕೃಷ್ಣರು ಮಾತ್ರವೇ ಅರಿತಿದ್ದರು; ಹಾಗೂ ಸ್ವಾಮೀಜಿ ಸ್ವಲ್ಪ ಮಟ್ಟಿಗೆ ಅರಿತಿದ್ದರು. ಸ್ವಾಮೀಜಿ ಪಾಶ್ಚಾತ್ಯ ದೇಶಗಳಿಗೆ ಹೋಗುವ ಮುನ್ನ ಶ್ರೀಮಾತೆಯವರಿಗೆ ಮಾತ್ರವೇ ಅದನ್ನು ತಿಳಿಸಿದ್ದರು ಹಾಗೂ ಅವರಿಂದ ಆಶೀರ್ವಾದವನ್ನು ಪಡೆದು ಸಮುದ್ರವನ್ನು ದಾಟಿ ಹೋಗಿದ್ದರು. ಶ್ರೀಮಾತೆ ಕೂಡ ಅವರಿಗೆ ಹೃದಯಪೂರ್ವಕ ಆಶೀರ್ವಾದ ಮಾಡುತ್ತ, ''ಮಗೂ, ನೀನು ದಿಗ್ವಿಜಯ ಹೊಂದಿ ಮರಳಿ ಬಾ; ನಿನ್ನ ಬಾಯಲ್ಲಿ ಸರಸ್ವತಿಯೇ ನೆಲೆಸಲಿ'' ಎಂದಿದ್ದರು. ಅದೇ ರೀತಿ ಆಯಿತು ಕೂಡ. ಶ್ರೀಮಾತೆಯವರ ಆಶೀರ್ವಾದದಿಂದ ಸ್ವಾಮೀಜಿ ವಿಶ್ವವಿಜಯಿಯಾದರು. ಶ್ರೀಮಾತೆಯವರ ಮೇಲೆ ಸ್ವಾಮೀಜಿಗೆ ಅದೆಷ್ಟು ಗಾಢವಾದ ಭಕ್ತಿಯಿತ್ತು! ಶ್ರೀಮಾತೆಯವರ ಆಶೀರ್ವಾದವನ್ನು ಪಡೆದು, ಸಮುದ್ರ ದಾಟಿ ಹೋಗಿ ವಿಶ್ವವನ್ನೇ ಜಯಿಸಿ ಬಂದೆನೆಂದು ಅವರು ಹೇಳುತ್ತಿದ್ದರು. ಶ್ರೀರಾಮಕೃಷ್ಣರಿಗೆ ಹೋಲಿಸಿದರೆ, ಶ್ರೀಮಾತೆಯವರೇ ಹೆಚ್ಚಿನವರೆಂದೂ ಅವರು ಕೆಲವೊಮ್ಮೆ ಹೇಳುತ್ತಿದ್ದರು. ಶ್ರೀಮಾತೆಯವರ ಮೇಲೆ ಅವರಿಗೆ ಅಂಥ ಗಾಢ ಭಕ್ತಿಯಿತ್ತು! ಶ್ರೀರಾಮಕೃಷ್ಣರು ಕೂಡ ಹೇಳುತ್ತಿದ್ದರು, ''ನಹಬತ್'ಲ್ಲಿ ಯಾರು ಇದ್ದಾರೋ, ಅವಳು ಯಾವುದೇ ಕಾರಣಕ್ಕೆ ಯಾರ ಮೇಲಾದರೂ ಕೋಪಿಸಿಕೊಂಡರೆ, ಅವರನ್ನು ರಕ್ಷಿಸಲು ನನ್ನಿಂದಲೂ ಅಸಾಧ್ಯ'' ಎಂದು.



ಜಗತ್ತಿನ ಸಮಸ್ತ ನಾರಿಯರನ್ನು ಎಚ್ಚರಗೊಳಿಸುವುದಕ್ಕಾಗಿಯೇ ಮಹಾಶಕ್ತಿರೂಪಿಣಿಯಾದ ಶ್ರೀಮಾತೆ ಮಾನವ ದೇಹವನ್ನು ಧರಿಸಿ ಬಂದರು. ಅವರ ಆಗಮನದ ನಂತರವೇ ಎಲ್ಲ ದೇಶಗಳಲ್ಲಿ ಸ್ತ್ರೀವರ್ಗದಲ್ಲಿ ನವಜಾಗೃತಿ ಆರಂಭಗೊಂಡಿತು! ಈಗ ಅವರು ತಮ್ಮ ಜೀವನವನ್ನು ಪರಿಪೂರ್ಣವಾಗಿಯೂ, ಸರ್ವಾಂಗ ಸುಂದರವಾಗಿಯೂ ರೂಪಿಸಿಕೊಳ್ಳಲು ಸಿದ್ಧರಾಗಿದ್ದಾರೆ. ಈಗಲಾದರೂ ಏನು ನಡೆದಿದೆ? ಇದು ಎಲ್ಲವೂ ಆರಂಭವಷ್ಟೇ. ವೈದಿಕ ಹಾಗೂ ಪೌರಾಣಿಕ ಯುಗದಲ್ಲಿ ಹೇಗೆ ಗಾರ್ಗಿ, ಮೈತ್ರೇಯಿ, ಸೀತಾ, ಸಾವಿತ್ರಿಯೇ ಮೊದಲಾದ ಅದ್ಭುತವಾದ ಸ್ತ್ರೀಚಾರಿತ್ರ್ಯದ ವಿಕಾಸವುಂಟಾಗಿತ್ತೋ, ಈ ಯುಗದಲ್ಲಿ ಸ್ತ್ರೀಯರಲ್ಲಿ ಅದಕ್ಕಿಂತಲೂ ಹೆಚ್ಚಿನ ವಿಕಾಸವುಂಟಾಗುವುದು. ಸ್ತ್ರೀಯರಲ್ಲಿ ಆಧ್ಯಾತ್ಮಿಕತೆ, ರಾಜಕೀಯ, ವಿಜ್ಞಾನ, ಕಲೆ, ಸಾಹಿತ್ಯ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಅತ್ಯಂತ ಆಶ್ಚರ್ಯಜನಕವಾದ ಜಾಗೃತಿಯುಂಟಾಗಿದೆ, ಇನ್ನೂ ಆಗಲಿದೆ. ಇದೆಲ್ಲವೂ ದೈವೀಶಕ್ತಿಯ ಲೀಲೆ. ಸಾಮಾನ್ಯ ಮಾನವನು ಇದೆಲ್ಲದರ ಹಿಂದಿನ ಗೂಢ ರಹಸ್ಯವನ್ನು ಸ್ವಲ್ಪವೂ ತಿಳಿಯಲಾರ.

ಶ್ರೀಮಾತೆಯವರು ಎಲ್ಲರ ಮಾತೆಯಾಗಿದ್ದರು. ಅವರಲ್ಲಿ ಎಷ್ಟೊಂದು ದಯೆ, ಎಷ್ಟೊಂದು ಕ್ಷಮೆ ಹಾಗೂ ಎಂಥ ಅದ್ಭುತ ವಾದ ಸಹಿಷ್ಣುತೆಯಿತ್ತು! ನಾವು ಶ್ರೀಮಾತೆಯವರನ್ನು ಎಷ್ಟರ ಮಟ್ಟಿಗೆ ತಿಳಿದಿದ್ದೇವೆ? ಆದರೂ ಅವರು ಕೃಪೆ ತೋರಿ ಒಂದಿಷ್ಟು ತಿಳಿಸಿಕೊಟ್ಟಿದ್ದಾರೆ – ಅವರೇ ಸಾಕ್ಷಾತ್ ಜಗನ್ಮಾತೆ ಎಂದು. ಅವರ ಸ್ವರೂಪ ಎಂತಹದು ಎಂಬುದನ್ನು ಅವರೇ ದಯೆ ತೋರಿ ತಿಳಿಸಿಕೊಡದಿದ್ದರೆ, ಅವರನ್ನು ಅರಿತುಕೊಳ್ಳಲು ಬೇರೆ ಯಾವ ದಾರಿಯೂ ಇಲ್ಲ. ಮೊದಲಿಗೆ ಯೋಗಿನ್ ಮಹಾ ರಾಜ್ (ಸ್ವಾಮಿ ಯೋಗಾನಂದರು), ಅನಂತರ ಶರತ್ ಮಹಾ ರಾಜ್ (ಸ್ವಾಮಿ ಶಾರದಾನಂದರು) ಶ್ರೀಮಾತೆಯವರ ಸೇವೆ ಯನ್ನು ಬಹಳಷ್ಟು ಮಾಡಿದರು. ನಾನೂ ಒಂದು ಬಾರಿ ಜಯ ರಾಮಬಾಟಿಗೆ ಹೋಗಿ, ಅಡುಗೆ ಮಾಡಿ ಶ್ರೀಮಾತೆಯವರಿಗೆ ಊಟ ಮಾಡಿಸಿದ್ದೇನೆ. ಅದು ಬಹಳ ಹಿಂದಿನ ಮಾತು – ಶ್ರೀ ರಾಮಕೃಷ್ಣರು ದೇಹತ್ಯಾಗ ಮಾಡಿದ ಕೆಲವು ವರ್ಷಗಳ ನಂತರ. ಆಗ ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದರು. ನಾನು, ಶಶಿ ಮಹಾರಾಜ್ (ಸ್ವಾಮಿ ರಾಮಕೃಷ್ಣಾನಂದರು), ಇನ್ನೂ ಒಬ್ಬರಿದ್ದರು, ಸರಿಯಾಗಿ ನೆನಪಿಲ್ಲ ; ಬಹುಶಃ ಖೋಕಾ ಮಹಾರಾಜ್ (ಸ್ವಾಮಿ ಸುಬೋಧಾನಂದರು) ಇರಬೇಕು – ನಾವು ಮೂರು ಮಂದಿ ಶ್ರೀಮಾತೆಯವರ ದರ್ಶನ ಮಾಡಲು ಜಯರಾಮಬಾಟಿಗೆ ಹೋಗಿದ್ದೆವು. ಆಗ ಭಕ್ತರು ಯಾರೂ ಜಯರಾಮಬಾಟಿಗೆ ಹೆಚ್ಚಾಗಿ ಹೋಗುತ್ತಿರಲಿಲ್ಲ. ಅಲ್ಲಿಗೆ ಹೋಗಿ ಬರುವುದಕ್ಕೂ ಬಹಳ ಕಷ್ಟಪಡಬೇಕಿತ್ತು. ನಾವು ಹೋಗುವ ವಿಷಯವನ್ನು ಶ್ರೀಮಾತೆಯವರಿಗೆ ಮೊದಲೇ ತಿಳಿಸಿದ್ದೆವು. ನಮ್ಮನ್ನು ನೋಡಿ ಶ್ರೀಮಾತೆಯವರಿಗೆ ಎಂಥ ಆನಂದವುಂಟಾಯಿತು! ನಮಗೆ ಏನನ್ನು ತಿನ್ನಿಸುವುದು, ಹೇಗೆ ನಮ್ಮನ್ನು ಆನಂದಪಡಿಸುವುದು – ಈ ಚಿಂತೆಯಲ್ಲೇ ಅವರು ದಿನವೆಲ್ಲ ಕಳೆಯುತ್ತಿದ್ದರು. ಜಯರಾಮಬಾಟಿಯಾದರೋ – ಕುಗ್ರಾಮ; ಅಲ್ಲಿ ಯಾವುದೇ ಸಾಮಾನು ಸಿಗುತ್ತಿರಲಿಲ್ಲ. ಅಂತಹುದರ ನಡುವೆಯೇ ಶ್ರೀಮಾತೆ ಹಾಲಿನವನಿಗೆ ಹೇಳಿ ಹಾಲಿನ ವ್ಯವಸ್ಥೆ, ಬೆಸ್ತನಿಗೆ ಹೇಳಿ ಮೀನಿನ ವ್ಯವಸ್ಥೆ, ಹಾಗೂ ಹಲವು ಬಗೆಯ ತರಕಾರಿ ವಸ್ತು ಇತ್ಯಾದಿಗಳನ್ನು ಸಂಗ್ರಹಿಸಿ ಟ್ಟಿರುತ್ತಿದ್ದರು. ಕಲ್ಕತ್ತೆಯ ಜನರಿಗೆ ಚಹಾ ಕುಡಿಯುವ ಅಭ್ಯಾಸ ವಿತ್ತೆಂಬುದು ಶ್ರೀಮಾತೆಯವರಿಗೆ ತಿಳಿದಿತ್ತು. ಆದ್ದರಿಂದ ನಮ ಗೋಸ್ಕರ ಚಹಾ ಮಾಡಲು ಕೂಡ ವ್ಯವಸ್ಥೆ ಮಾಡಿದ್ದರು. ಇಡೀ ದಿನ ಬಹಳ ಆನಂದದಲ್ಲಿ ಕಳೆಯಿತು. ನಾವು ತಾಲಪುಕುರ (ಕೆರೆ)ದಲ್ಲಿ ಹಲವು ಬಾರಿ ಸ್ನಾನ ಮಾಡಿದ್ದೆವು. ಶ್ರೀಮಾತೆ ಯವರು ಹೆಚ್ಚಾಗಿ ನಮ್ಮ ಮುಂದೆ ಬರುತ್ತಿರಲಿಲ್ಲ , ಮಾತು ಕೂಡ ಆಡುತ್ತಿರಲಿಲ್ಲ.

ರಾತ್ರಿ ಹೊತ್ತು ಊಟಮಾಡಿ, ಮಲಗಿದ ಮೇಲೆ ಶಶಿ ಮಹಾರಾಜರೊಂದಿಗೆ ಚರ್ಚಿಸಿ ತೀರ್ಮಾನಿಸಿದೆವು, ಮರುದಿನ ನಾವು ಅಡುಗೆ ಮಾಡಿ ಶ್ರೀಮಾತೆಯವರಿಗೆ ಉಣಬಡಿಸ ಬೇಕೆಂದು. ಮರುದಿನ ಬೆಳಿಗ್ಗೆ ಚಹಾ ಇತ್ಯಾದಿ ಸೇವಿಸಿದ ನಂತರ, ಶ್ರೀಮಾತೆಯವರಿಗೆ ಈ ವಿಷಯವನ್ನು ತಿಳಿಸಿದೆವು. ಮೊದಲಿಗೆ ಅವರು ನಗುತ್ತ ನಮ್ಮ ಮಾತನ್ನು ತಳ್ಳಿಹಾಕಿದರು. ಅವರೆಂದರು, ''ಅದು ಹೇಗಾಗುತ್ತದೆ ಮಗೂ, ನೀವು ನನ್ನ ಬಳಿಗೆ ಬಂದಿದ್ದೀರಿ, ನಾನು ನಿಮ್ಮ ತಾಯಿ, ನಾನು ನಿಮಗೆ ಅಡುಗೆ ಮಾಡಿ ಉಣಬಡಿಸಬೇಕೇ, ಅಥವಾ ನೀವು ಹೇಳು ವಂತೆ, ನೀವೇ ಅಡುಗೆ ಮಾಡಿ ನನಗೆ ಉಣಬಡಿಸಬೇಕೆ? ಅಲ್ಲದೆ, ನಿಮಗೆ ಅಡುಗೆ ಮಾಡಲು ಬರುತ್ತದೆಯೆ? ಒಲೆ ಊದಿ ಊದಿ ನಿಮ್ಮ ಕಣ್ಣು ಕೆಂಪಗಾದೀತು.'' ಈ ರೀತಿ ಅವರು ಹಲವು ರೀತಿಯ ತೊಂದರೆಗಳನ್ನು ಹೇಳಿದರು. ನಾವು ಶ್ರೀಮಾತೆಯವರ ಮಾತುಗಳನ್ನು ಕೇಳಲೇ ಇಲ್ಲ ; ಬಹಳ ಹಟ ಮಾಡತೊಡಗಿದೆವು. ಕೊನೆಯದಾಗಿ ನಾನು ಹೇಳಿದೆ: ''ನಾವಂತೂ ಬ್ರಾಹ್ಮಣರು. ನಮ್ಮ ಕೈಯಿಂದ ಮಾಡಿದ ಅಡುಗೆಯನ್ನು ಊಟ ಮಾಡಲು ನಿಮಗೇನು ತೊಂದರೆ? ಶ್ರೀರಾಮಕೃಷ್ಣರೂ ನಮ್ಮ ಕೈಯಿಂದ ಮಾಡಿದ ಅಡುಗೆಯನ್ನು ಉಂಡಿದ್ದರು'' – ಎಂದು. ಕೊನೆಗೂ ಶ್ರೀಮಾತೆಯವರು ಒಪ್ಪಿದರು. ನಾನು ಮತ್ತು ಶಶಿ ಮಹಾರಾಜ್ ಅಡುಗೆ ಮಾಡಿ ದೆವು. ಅದನ್ನು ಉಂಡು ಶ್ರೀಮಾತೆಯವರು ಬಹಳ ಆನಂದ ಗೊಂಡರು.

ಆ ಬಾರಿ ನಾವು ಶ್ರೀಮಾತೆಯವರ ಬಳಿ ಅತ್ಯಂತ ಆನಂದ ದಿಂದ ಕೆಲವು ದಿನಗಳನ್ನು ಕಳೆದೆವು. ಆಹಾ! ಶ್ರೀಮಾತೆಯವ ರದು ಅದೆಂಥ ಪ್ರೀತಿ!

ನಮಗೆ ಯಾವುದೇ ರೀತಿಯ ಅನನುಕೂಲವಾಗದಂತೆ ನೋಡಿಕೊಳ್ಳಲು ಅವರು ಬೆಳಗಿನಿಂದ ರಾತ್ರಿಯತನಕವೂ ಹಲವು ಕೆಲಸಗಳಲ್ಲಿ ಮುಳುಗಿರುತ್ತಿದ್ದರು. ನನ್ನ ಸಣ್ಣ ವಯಸ್ಸಿ ನಲ್ಲೇ ನನ್ನ ಹೆತ್ತತಾಯಿ ತೀರಿಕೊಂಡಿದ್ದರು; ನಿಜವಾಗಿಯೂ ತಾಯ ಪ್ರೀತಿಯೆಂದರೇನು ಎಂಬುದನ್ನೇ ನಾನು ಮರೆತು ಬಿಟ್ಟಿದ್ದೆ. ಆದರೆ ಜಯರಾಮಬಾಟಿಯಲ್ಲಿ ನಾನು ಅದೇ ಪ್ರೀತಿ, ಕಾಳಜಿಗಳನ್ನು ಪಡೆದಿದ್ದೆ. ಕೆಲವು ದಿನಗಳ ನಂತರ ಒಂದು ದಿನ ರಾತ್ರಿ ನನಗೆ ಜೋರಾಗಿ ನಡುಕವುಂಟಾಗಿ, ಜ್ವರಬಂತು. ಸಂಜೆ ಯೇ ನನಗೆ ತುಸು ಜ್ವರದ ಚಿಹ್ನೆ ಕಂಡುಬಂದಿತ್ತು; ಅದಾದ ಮೇಲೆ ನಾನು ಊಟ ಮಾಡಿದ್ದೆ. ಶ್ರೀಮಾತೆಯವರ ಬಳಿ ಊಟ ಮಾಡದೆ ಇರಲು ಸಾಧ್ಯವೇ ಇಲ್ಲ! ರಾತ್ರಿ ಮಲಗಿದ ಮೇಲೆ ವಿಪರೀತ ಮೈನಡುಕ, ಜ್ವರ. ರಾತ್ರಿ ಹೊತ್ತು ಕಳೆಯು ತ್ತಿದ್ದಂತೆಲ್ಲ ಜ್ವರವೂ ಹೆಚ್ಚಾಗತೊಡಗಿತು. ಇಡೀ ರಾತ್ರಿ ನನಗೆ ಒಂದು ರೀತಿಯಲ್ಲಿ ಪ್ರಜ್ಞೆಯಿಲ್ಲದೆ ಕಳೆದೆ. ರಾತ್ರಿ ಕಡೆಯ ಗಳಿಗೆಯಲ್ಲಿ ಶಶಿ ಮಹಾರಾಜರನ್ನು ನಿಧಾನವಾಗಿ ಕರೆದು ಹೇಳಿದೆ: ''ತಮ್ಮಾ, ಇನ್ನು ಸಾಕು. ಇಲ್ಲಿ ಜ್ವರ ಹಿಡಿದು ಮಲಗಿ ಬಿಟ್ಟರೆ, ಶ್ರೀಮಾತೆಯವರಿಗೆ ಸುಮ್ಮನೆ ಕಷ್ಟವಾಗುವುದು. ನಾಳೆ

ಬೆಳಿಗ್ಗೆಯೇ ಶ್ರೀಮಾತೆಯವರಿಂದ ಬೀಳ್ಕೊಂಡು ಹೊರಟುಬಿಡ ಬೇಕು. ಆ ಮೇಲೆ ಏನಾಗುತ್ತದೋ ಆಗಲಿ.'' ಶಶಿ ಮಹಾ ರಾಜರೂ ಅದಕ್ಕೆ ಸಮ್ಮತಿಸಿದರು. ಬೆಳಗಾಗುತ್ತಿದ್ದಂತೆಯೇ ನಾವು ಮೂವರೂ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಹೊರಟೆವು. ಇಷ್ಟು ಬೇಗನೆ ಹೊರಟುಬಿಟ್ಟಿದ್ದಕ್ಕಾಗಿ, ಮೊದ ಮೊದಲು ಶ್ರೀಮಾತೆಯವರು ನಾವು ಹೊರಡಲು ಒಪ್ಪಲಿಲ್ಲ. ಕೊನೆಗೆ ನಮ್ಮ ಕಾತರತೆಯನ್ನು ನೋಡಿ, ಸುಮ್ಮನಾದರು.

ಶ್ರೀಮಾತೆಯವರು ನಮ್ಮೆಲ್ಲರ ತಾಯಿ; ಸಾಕ್ಷಾತ್ ಜಗ ಜ್ಜನನಿ. ಶ್ರೀರಾಮಕೃಷ್ಣರ ಲೀಲಾಸಹಾಯಕಿಯಾಗಿ ಮಾನವ ದೇಹಧಾರಿಯಾಗಿ ಬಂದರು. ಶ್ರೀಮಾತೆಯವರನ್ನು ನಾವು ಯಾರೂ ಅರಿತುಕೊಳ್ಳಲು ಸಮರ್ಥರಾಗಲಿಲ್ಲ. ಅವರು ತಮ್ಮ ಭಾವವನ್ನು ಎಷ್ಟೊಂದು ಅಡಗಿಸಿಟ್ಟುಕೊಂಡರು ಎಂದರೆ, ಅವ ರನ್ನು ಯಾರು ಅರಿತುಕೊಳ್ಳುವರು? ಅವರು ಸಾಕ್ಷಾತ್ ಭಗವತಿ ಎಂದು ಯಾರು ಹೇಳಬಲ್ಲರು? ಒಂದು ದಿನ ಶ್ರೀರಾಮ ಕೃಷ್ಣರು ನಮಗೆ ಹೇಳಿದ್ದರು: ''ದೇವಾಲಯದಲ್ಲಿ ಇರುವ ತಾಯಿ, ಹಾಗೂ ಅಲ್ಲಿ ನಹಬತ್‌ನಲ್ಲಿ ಇರುವ ತಾಯಿ- ಇಬ್ಬರೂ ಒಂದೇ.'' ಶ್ರೀಮಾತೆಯವರ ಬಳಿ ಅತ್ಯಂತ ಭಕ್ತಿ- ವಿಶ್ವಾಸಗಳೊಂದಿಗೆ ಪ್ರಾರ್ಥಿಸಬೇಕು. ಅವರು ಪ್ರಸನ್ನರಾದರೆ ಮಾತ್ರವೇ ಜೀವಿಗೆ ಭಕ್ತಿ, ಮುಕ್ತಿ ಎಲ್ಲವೂ ಉಂಟಾಗುವುದು.

ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಆಶ್ರಯದಲ್ಲಿದ್ದಾಗ, ಶ್ರೀರಾಮಕೃಷ್ಣರು ಅತ್ಯಂತ ಕಾಳಜಿ ಯಿಂದ ಅವರನ್ನು ತಮ್ಮ ಬಳಿ ಇಟ್ಟುಕೊಂಡಿದ್ದರು. ಅದಲ್ಲದೆ, ಅವರಿಗೆ ಸಾಧನೆ, ಭಜನೆಗಳ ಬಗ್ಗೆ ವಿಶೇಷವಾಗಿ ಉಪದೇಶ ನೀಡಿದ್ದರು; ಸ್ಫೂರ್ತಿ, ಪ್ರೇರಣೆ ನೀಡಿದ್ದರು, ಅದಕ್ಕೆ ಬೇಕಾದ ಎಲ್ಲ ಸಹಕಾರವನ್ನೂ ನೀಡಿದ್ದರು. ಆದರೆ ಶ್ರೀರಾಮಕೃಷ್ಣರು ಅದೆಲ್ಲವನ್ನೂ ತಮ್ಮ ನಿರ್ವಿಕಲ್ಪ ಸಮಾಧಿಯ ನಂತರವೇ ಮಾಡಿ ದ್ದರು. ಅದಕ್ಕೆ ಸಂಬಂಧಪಟ್ಟಂತೆ ಅವರು ನಮಗೆ ಹೇಳು ತ್ತಿದ್ದರು: ''ಕಾಳೀ ಮಂದಿರದಲ್ಲಿ ಯಾವ ಮಾತೆಯಿದ್ದಾಳೋ, ಅವಳೇ ಇದರಲ್ಲಿ (ತಮ್ಮ ದೇಹವನ್ನು ತೋರಿಸುತ್ತ) ವಿರಾಜ ಮಾನಳಾಗಿದ್ದಾಳೆ, ಹಾಗೂ ಅದೇ ಮಾತೆಯೇ (ಶ್ರೀಮಾತೆ ಯವರ ರೂಪದಲ್ಲಿ) ನನ್ನ ಬಳಿ ವಾಸವಾಗಿದ್ದಾಳೆ.'' ಶ್ರೀರಾಮ ಕೃಷ್ಣರು ಏಕೆ ಹಾಗೆ ಮಾಡಿದರೆಂದು ನಾನೆಂದೂ ತಿಳಿಯಬಯ ಸಿಲ್ಲ; ಅದಕ್ಕೆ ಪ್ರಯತ್ನವನ್ನೂ ಮಾಡಿಲ್ಲ. ಆದರೆ ಅವರೇ ಹಾಗೆ ಮಾಡಿದರೆಂದು ನಮಗೆ ತಿಳಿದಿದೆ, ಅಷ್ಟೆ. ಸಾಕ್ಷಾತ್ ಭಗವಂತನೇ ನರದೇಹವನ್ನು ಧರಿಸಿ ಶ್ರೀರಾಮಕೃಷ್ಣರ ರೂಪದಿಂದ ಬಂದರು. ಅವರ ಕಾರ್ಯದ ಉದ್ದೇಶವನ್ನು ತಿಳಿಯುವುದು ನಮ್ಮಂತಹ ಅಲ್ಪಮತಿಯವರಿಗೆ ಅಸಾಧ್ಯ. ಹಾಗೆ ತಿಳಿಯಬೇಕೆಂಬ ಪ್ರವೃತ್ತಿ ಕೂಡ ನಮಗೆಂದೂ ಉಂಟಾಗಲಿಲ್ಲ.

ಜೀವ, ಜಗತ್ತುಗಳ ಕಲ್ಯಾಣಕ್ಕಾಗಿ ಮಹಾಮಾಯೆಯೇ ಸಾಕ್ಷಾತ್ತಾಗಿ ಜನ್ಮವೆತ್ತಿ ಬಂದರು. ಅವರ ಮನುಷ್ಯ ಲೀಲೆಯನ್ನು ಅರಿಯುವುದು ಅತ್ಯಂತ ಕಠಿಣ. ಅವರೇ ಕೃಪೆ ಮಾಡಿ ತಿಳಿಸಿ ಕೊಡದಿದ್ದರೆ, ಯಾರು ಅರಿತುಕೊಳ್ಳುವರು? ಅವರು ಎಷ್ಟರ ಮಟ್ಟಿಗೆ ಸಾಮಾನ್ಯರಂತೆ ಇರುತ್ತಿದ್ದರು! ಎಂಥ ಗೋಪ್ಯತೆ! ನಿಜಕ್ಕೂ ಛದ್ಮವೇಷದಿಂದ ಇರುವಂತಿದ್ದರು.

ನಮ್ಮ ತಾಯಿಯ ಹೆಸರು ಶಾರದಾ. ಈ ಮಾತೆಯೇ ಸಾಕ್ಷಾತ್ ಸರಸ್ವತಿ. ಅವರೇ ಕೃಪೆ ತೋರಿ ಜ್ಞಾನ ನೀಡುವರು. ಜ್ಞಾನವೆಂದರೆ, ಭಗವಂತನನ್ನು ತಿಳಿಯುವುದು. ಈ ಜ್ಞಾನ ವುಂಟಾದರೆ ಮಾತ್ರವೇ ನಿಜವಾದ ಪಕ್ವ ಭಕ್ತಿ ಉಂಟಾಗುವುದು. ಜ್ಞಾನವುಂಟಾಗದೆ ಭಕ್ತಿಯುಂಟಾಗದು. ಶುದ್ಧ ಜ್ಞಾನ ಮತ್ತು ಶುದ್ಧ ಭಕ್ತಿ – ಇವು ಒಂದೇ ವಸ್ತು. ಶ್ರೀಮಾತೆಯವರ ಕೃಪೆ ಯುಂಟಾದರೆ ಮಾತ್ರವೇ ಅವೆರಡೂ ಲಭಿಸುವುವು. ಅವರೇ ಜ್ಞಾನ ನೀಡುವುದಕ್ಕೆ ಅಧಿಕಾರವುಳ್ಳವರು. ಅವರು ಕೃಪೆ ಮಾಡಿ, ಬ್ರಹ್ಮವಿದ್ಯೆಯ ದ್ವಾರವನ್ನು ತೆರೆದರೆ ಮಾತ್ರವೇ ಜೀವಕ್ಕೆ ಬ್ರಹ್ಮ ವಿದ್ಯೆಯ ಅಧಿಕಾರ ಲಭಿಸುವುದು; ಇಲ್ಲದಿದ್ದರೆ ಇಲ್ಲ. ಚಂಡೀ (ದುರ್ಗಾಸಪ್ತಶತೀ)ಯಲ್ಲಿ ಇದೆ. ''ಸೈಷಾ ಪ್ರಸನ್ನಾ ವರದಾ ನೃಣಾಂ ಭವತಿ ಮುಕ್ತಯೇ'' – ಆ ಮಹಾಮಾಯೆ ಪ್ರಸನ್ನ ಳಾದರೆ, ಮಾನವರಿಗೆ ಮುಕ್ತಿಗಾಗಿ ವರ ನೀಡುವಳು. ಮಿದುಳಿ ನಲ್ಲಿ ಎಷ್ಟೊಂದು ಸೂಕ್ಷ್ಮವಾದ ಸ್ನಾಯುಗಳಿವೆ! ಅವುಗಳಲ್ಲಿ ಒಂದಿಷ್ಟು ಹೆಚ್ಚುಕಡಿಮೆಯಾಗಿ ಹೋದರೂ ಮುಗಿಯಿತು. ಶ್ರೀಮಾತೆ ಹೇಳುತ್ತಿದ್ದರು ''ತಲೆ ಸರಿಯಾಗಿ ಇರಿಸುವಂತೆ ಶ್ರೀರಾಮಕೃಷ್ಣರ ಬಳಿ ಪ್ರಾರ್ಥನೆ ಮಾಡು'' ಎಂದು. ತಲೆ ಕೆಟ್ಟುಹೋದರೆ – ಎಲ್ಲವೂ ಹೋದ ಹಾಗೆ. ಸ್ವಾಮೀಜಿ ಹೇಳು ತ್ತಿದ್ದರು, ''Shoot me if my brain goes wrong''. ('ನನ್ನ ತಲೆ ಕೆಟ್ಟು ಹೋದರೆ ನನ್ನನ್ನು ಗುಂಡುಹಾಕಿ ಕೊಲ್ಲು.')

ಬೇಲೂರು ಮಠದಲ್ಲಿ ದುರ್ಗಾಪೂಜೆ ನಡೆಯುವಂತೆ ಬೇರೆಲ್ಲೂ ನಡೆಯದು. ಇಲ್ಲಿನ ಪೂಜೆ ನಿಜವಾಗಿಯೂ ಭಕ್ತಿಯ ಪೂಜೆ. ನಮಗೆ ಬೇರೆ ಯಾವುದೇ ಬಯಕೆಗಳಿಲ್ಲ; ನಾವು ಕೇವಲ ಮಾತೆಯ ಮೇಲಿನ ಪ್ರೀತಿಯಿಂದಾಗಿ ಈ ಪೂಜೆ ಯನ್ನು ಮಾಡುತ್ತಿದ್ದೇವೆ. ನಮ್ಮ ಅದೇ ಬಾರಾನಗರ ಮಠ ದಿಂದಲೇ ಸ್ವಾಮೀಜಿ ದುರ್ಗಾಪೂಜೆಯನ್ನು ಆರಂಭಿಸಿದ್ದರು. ಆಗ ಘಟ-ಪಟಗಳಿಂದಲೇ (ಮೂರ್ತಿಯ ಬದಲು ಮಡಕೆ, ಚಿತ್ರಪಟ ಇವುಗಳನ್ನಿಟ್ಟು) ಪೂಜೆ ನಡೆಯುತ್ತಿತ್ತು. ಒಂದು ಸಲ ಅಲ್ಲಿ ಆಡಿನ ಬಲಿಯನ್ನೂ ನೀಡಲಾಗಿತ್ತು. ಸುರೇಶ ಬಾಬು ಆಡಿನ ಬಲಿ ನೀಡಿದ್ದ. ಬಳಿಕ ಆಡಿನ ಮಾಂಸದ ಮೂಲಕವೇ ಹೋಮವನ್ನೂ ಮಾಡಲಾಗಿತ್ತು. ಈ ಬಲಿಯ ವಿಚಾರವಾಗಿ ಮಾಸ್ಟರ್ ಮಹಾಶಯ ಮುಂತಾದ ಭಕ್ತರಿಗೆ ಬಹಳ ಆತಂಕ ವುಂಟಾಗಿತ್ತು. ಅವರೆಲ್ಲರೂ ಶ್ರೀಮಾತೆಯವರ ಬಳಿಗೆ ಹೋಗಿ ಈ ಕುರಿತಾಗಿ ಹೇಳಿಕೊಂಡರು. ಅದನ್ನು ಕೇಳಿ ಶ್ರೀಮಾತೆ ಹೇಳಿದರು, ''ಇವರಿಗೆ ಇಷ್ಟೊಂದು ಸಂಕಟವಾಗುವ ಹಾಗಿ ದ್ದರೆ, ಬಲಿ ಕೊಡದಿದ್ದರೂ ತೊಂದರೆಯಿಲ್ಲ.'' ಅದರ ನಂತರ

ಆಡಿನ ಬಲಿ ಅಲ್ಲಿ ನೀಡಲಿಲ್ಲ. ಇಲ್ಲೂ (ಬೇಲೂರು ಮಠದಲ್ಲಿ) ಸ್ವಾಮೀಜಿಯವರೇ ಮೊದಲ ಬಾರಿಗೆ ದುರ್ಗಾ ಪ್ರತಿಮೆಯನ್ನಿಟ್ಟು ದುರ್ಗಾಪೂಜೆ ಮಾಡಿದರು. ದುರ್ಗಾಪೂಜೆಯ ಸಮಯದಲ್ಲಿ ಕೆಲವು ದಿನ ಶ್ರೀಮಾತೆಯವರೂ ಬಂದಿದ್ದರು, ಬೇಲೂರಿನಲ್ಲಿ ತಂಗಿದ್ದರು. ನೀಲಾಂಬರ ಬಾಬುವಿನ ಬಾಡಿಗೆ ಮನೆಯಲ್ಲಿ ಅವರು ಉಳಿದುಕೊಂಡಿದ್ದರು. ಶ್ರೀಮಾತೆ ಹೇಳಿದ್ದರು: ''ಪ್ರತಿ ವರ್ಷವೂ ದುರ್ಗಾಮಾತೆ ಇಲ್ಲಿಗೆ ಬರುವಳು.''

ಶ್ರೀಮಾತೆಯವರೇ ಸಾಕ್ಷಾತ್ ಸರಸ್ವತಿ. ಅವರ ಕೃಪೆಯಿಂದಲೇ ನಮ್ಮ ಮಠದಲ್ಲಿ ಅವರ ಪೂಜೆ ಪ್ರತಿದಿನವೂ ನಡೆಯುವುದು. ಅವರೇ ಕೃಪೆದೋರಿ ಎಲ್ಲರ ಅಜ್ಞಾನವನ್ನು ದೂರ ಮಾಡುವರು; ಜ್ಞಾನ-ಭಕ್ತಿಗಳನ್ನು ನೀಡುವರು.

ನಮ್ಮ ತಾಯಿ ಶ್ರೀಮಾತೆ ಸಾಮಾನ್ಯ ಮನುಷ್ಯರಲ್ಲ ; ಅವರು ಅವತಾರ ವರಿಷ್ಠರ ಲೀಲಾಸಂಗಿನಿಯಾಗಿದ್ದಾರೆ. ಶ್ರೀರಾಮಕೃಷ್ಣರ ಲೀಲೆಗೆ ಸಹಕಾರಿಯಾಗಲು ಅವರು ನರ ದೇಹ ಧಾರಣೆ ಮಾಡಿದರು.

ಶ್ರೀರಾಮಚಂದ್ರ, ಕೃಷ್ಣ, ಬುದ್ಧ, ಚೈತನ್ಯರ ಜೊತೆಗೆ ಈ ಮಾತೆಯೇ ಅವತರಿಸಿ ಬಂದರು. ಆದರೆ ಅವರನ್ನು ಯಾರು ಗುರುತಿಸಬಲ್ಲರು? ಮನೆ ಸೊಸೆಯಂತೆ ಅವರು ತಲೆ ಸೆರಗನ್ನು ಹೊದ್ದುಕೊಂಡೇ ಇರುತ್ತಿದ್ದರು. ಅವರೇ ಕೃಪೆಮಾಡಿ ತಿಳಿಸಿಕೊಡದಿದ್ದರೆ ಅವರನ್ನು ಯಾರು ಅರಿತುಕೊಳ್ಳಬಲ್ಲರು? ಅವರು ಜನ್ಮವೆತ್ತಿ ಬರುವರು ಎಂಬುದೇ ಮಾನವರ ಸೌಭಾಗ್ಯ. ಆದರೆ ಅವರನ್ನು ಬಹಳ ಕಡಿಮೆ ಜನರು ಮಾತ್ರವೇ ಅರಿತುಕೊಳ್ಳಬಲ್ಲರು ಎಂಬುದೇ ಮಾನವರ ದೌರ್ಭಾಗ್ಯ.

**'ಇಂದಿಗೂ ಅದೆ ಲೀಲೆಯನು ಗೈವ ಗೌರಾಂಗ,**
**ಭಾಗ್ಯವಂತರು ಕೆಲರೆ ಅವನ ಕಾಣುವರು.'**

ಯಾರಿಗೆ ಕಾಣುವ ಕಣ್ಣು ಇದೆಯೋ ಅವರು ಮಾತ್ರ ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರನ್ನು ಅರಿತುಕೊಳ್ಳಲು ಸಮರ್ಥರಾದರು. ಶ್ರೀಮಾತೆಯವರ ದೇಹತ್ಯಾಗದ ನಂತರ, ಅವರ ಚಿತೆ ಉರಿದ ಮೇಲೆ ಮಳೆ ಸುರಿಯಲಾರಂಭಿಸಿತು. ಮಹಾಮಾಯೆಯ ಚಿತೆಯ ಮೇಲೆ ಶಾಂತಿಜಲವನ್ನು ಸುರಿಸಿ, ದೇವತೆಗಳು ಬೆಂಕಿಯನ್ನು ಆರಿಸಿಬಿಟ್ಟರೋ ಎನ್ನುವಂತಿತ್ತು. ಅಂದಿನಿಂದ ಈ ಸ್ಥಾನವು (ಬೇಲೂರು ಮಠ) ಮಹಾತೀರ್ಥವಾಗಿಬಿಟ್ಟಿತು. ಸತಿಯ ದೇಹದ ಒಂದೊಂದು ಅಂಗ ಬಿದ್ದ ಜಾಗವೆಲ್ಲ ಐವತ್ತೊಂದು ಶಕ್ತಿಪೀಠಗಳಾಗಿಬಿಟ್ಟವು! ಅದೇ ಸತಿಯ ಇಡೀ ದೇಹವನ್ನು ಬೇಲೂರು ಮಠದಲ್ಲಿ ದಹಿಸಲಾಯಿತು. ಬೇಲೂರು ಮಠ ಕೇವಲ ಶಕ್ತಿಪೀಠವಷ್ಟೇ ಅಲ್ಲ; ಇದು ಮಹಾಶಕ್ತಿಪೀಠ! ಜೈ ಮಾ! ಜೈ ಮಾ!!

ಶ್ರೀಮಾತೆಯವರು ಸಾಧಾರಣ ಮಾನವಿಯಲ್ಲ , ಸಾಧಕಿಯೂ ಅಲ್ಲ, ಅಥವಾ ಸಿದ್ಧೆಯೂ ಅಲ್ಲ. ಅವರು ನಿತ್ಯಸಿದ್ಧರು; ಅದೇ ಆದ್ಯಾಶಕ್ತಿಯ ಒಂದು ಪ್ರಕಾಶವಾಗಿದ್ದಾರೆ – ಕಾಳಿ, ತಾರಾ, ಷೋಡಶಿ, ಭುವನೇಶ್ವರಿ ಮುಂತಾದವರಂತೆ. ಈ ಯುಗದಲ್ಲಿ ಭಗವಂತನ ಭಕ್ತರಂತೆ ಅವರು ಅವತರಿಸಿದ್ದಾರೆ. ಯುಗಧರ್ಮ ಸಂಸ್ಥಾಪಕರಾದ ಶ್ರೀರಾಮಕೃಷ್ಣರ ಲೀಲಾ ಸಹಾಯಕಿಯಾಗಿ ಅವರು (ಹೇಗೆ ಪ್ರಭು ಶ್ರೀರಾಮಕೃಷ್ಣರೂ ಗೋಪ್ಯವಾಗಿ ಬಂದರೋ ಹಾಗೆ) ಗೋಪ್ಯವಾಗಿ, ಅತಿ ದೀನ ಭಾವದಿಂದ ತಂದೆ ತಾಯಂದಿರ ಗರ್ಭದಲ್ಲಿ ಜನಿಸಿ ಬಂದರು. ಬಂಗಾಳದ ಒಂದು ಕುಗ್ರಾಮದಲ್ಲಿ ಅವತರಿಸಿ ಬಂದ ಅವರು ಜೀವಿಗಳ ಐಹಿಕ-ಪಾರಮಾರ್ಥಿಕ ಉನ್ನತಿಗಾಗಿ ಯಾವಾಗಲೂ ಕಾರ್ಯತತ್ಪರರಾಗಿರುತ್ತಿದ್ದರು. ಅವರ ಕೃಪೆಗೆ ಯಾರು ಪಾತ್ರರಾದರೋ, ಅವರ ಅಹೇತುಕ ಮಾತೃಪ್ರೇಮವನ್ನು ಯಾರು ಪಡೆದರೋ, ಅವರೇ ಧನ್ಯರು. ಸರ್ವಭೂತಗಳ ಅಂತರಾತ್ಮವಾಗಿರುವ ಅದೇ ಕುಂಡಲಿನೀ ಶಕ್ತಿ, ಅದೇ ಜಗಜ್ಜನನಿಯ ಅಹೇತುಕ ಪ್ರೀತಿಯಿಂದ ಪರವಶರಾಗಿ ಯಾರ ಮೇಲೆ ತಮ್ಮ ಪವಿತ್ರ ಕರಕಮಲಗಳಿಂದ ಸ್ಪರ್ಶ ಮಾಡಿರುವರೋ, ಅವರಿಗೆ ಖಂಡಿತ ಚೈತನ್ಯವುಂಟಾಗಿಯೇ ಬಿಟ್ಟಿರುತ್ತದೆ; ಅಥವಾ ಮುಂದಾದರೂ ಖಂಡಿತ ಉಂಟಾಗುವುದು. ಇದು ನಮ್ಮ ದೃಢ ವಿಶ್ವಾಸ. * ❋

---

* ಈ ಲೇಖನವನ್ನು 'ಶಿವಾನಂದ ವಾಣಿ' (ಇಂಗ್ಲಿಷ್‌ನಲ್ಲಿ 'For Seekers of God'))ಎಂಬ ಬಂಗಾಳಿ ಗ್ರಂಥದಿಂದ ಸ್ವಾಮಿ ಪೂರ್ಣಾತ್ಮಾನಂದರು ಸಂಕಲನ ಮಾಡಿ, 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

## ನಿಜವಾದ ಪ್ರಾರ್ಥನೆ

ಒಬ್ಬ ಗಾಡಿ ಚಾಲಕ ಯೆಹೂದಿ ಧರ್ಮಮುಖಂಡ ರಬಿ ಬರ್ಡಿಕ್ಟೇವನ ಬಳಿಗೆ ಹೋಗಿ ಹೇಳಿದ: ''ಸ್ವಾಮಿ, ನನಗೆ ಒಂದು ಊರಿನಿಂದ ಇನ್ನೊಂದು ಊರಿಗೆ ಸಂಚರಿಸಬೇಕಾಗುತ್ತದೆ. ಇದರಿಂದ ಸಿನಗಾಗ್ ಮಂದಿರಕ್ಕೆ ಹೋಗಿ ಪ್ರಾರ್ಥಿಸಲು ಸಮಯ ಸಿಗುತ್ತಿಲ್ಲ. ನನಗೆ ಈ ಕೆಲಸ ಬಿಡುವುದಲ್ಲದೆ ಬೇರೆ ದಾರಿಯೇ ಕಾಣುತ್ತಿಲ್ಲ.''

ರಬಿ ಕೇಳಿದ: ''ನಿನ್ನ ಗಾಡಿಯಲ್ಲಿ ವೃದ್ಧ ಪ್ರಯಾಣಿಕರು ಕೂಡ ಬರುತ್ತಾರಲ್ಲವೆ?'' ''ಹೌದು ಸ್ವಾಮಿ. ಮುದುಕರು, ಬಡವರು, ದೀನ-ದರಿದ್ರರು ಕೂಡ ನನ್ನ ಗಾಡಿಯಲ್ಲಿ ಪ್ರಯಾಣಿಸುತ್ತಾರೆ. ಅವರನ್ನೆಲ್ಲ ನಾನು ಉಚಿತವಾಗಿ ಕರೆದೊಯ್ಯುತ್ತೇನೆ.''

ರಬಿ : ''ಹಾಗಿದ್ದರೆ ನೀನು ನಿನ್ನ ಕೆಲಸವನ್ನು ಬಿಡಬೇಡ. ಆ ಕೆಲಸ ಮಾಡುತ್ತಲೇ ನೀನು ದೇವರ ಪ್ರಾರ್ಥನೆ ಮಾಡುತ್ತಿರು. ಏಕೆಂದರೆ, ದೀನ-ದುಃಖಿತರ ಸೇವೆಯೇ ದೇವರ ಸೇವೆ. ಅದರೊಂದಿಗೆ ಮಾಡುವ ಪ್ರಾರ್ಥನೆಯೇ ನಿಜವಾದ ಪ್ರಾರ್ಥನೆ.'' *('ಪ್ರೇರಕ ಪ್ರಸಂಗ' ಗ್ರಂಥದಿಂದ)*